ಈ ಜಗ ಸೋಜಿಗ

# ನೀರಿನೊಳಗೊಂದು ಸುರಂಗ ಕೊರೆದು...

ನೀರಿನ ಮೇಲೆ ಸೇತುವೆ ಕಟ್ಟುವ ಬಗ್ಗೆ ನಾವೆಲ್ಲ ಕೇಳಿದ್ದೀವಿ. ಆದರೆ ನೀರಿನೊಳಗೆ ಸುರಂಗ ಕೊರೆಯುತ್ತಾರೆ ಅಂದ್ರೆ ನಂಬ್ತೀರಾ? ನಂಬ್ಲೇ ಬೇಕು. ಯಾಕಂದ್ರೆ ಡೆನ್ಮಾರ್ಕ್ ಮತ್ತು ಸ್ವೀಡನ್ನನ್ನು ಬೆಸೆಯುವ ಓರ್ಸಂಡ್ ಬ್ರಿಡ್ಜ್ ಎಂಬ ಸೇತುವೆ ಮುಂದೆ ಸಾಗುತ್ತ ಸಾಗುತ್ತ ಸುರಂಗವಾಗಿ ಬದಲಾಗಿದೆ. ನೀರಿನೊಳಗೇ ಈ ಸುರಂಗವಿರುವುದರಿಂದ ಅತ್ಯಂತ ಸೋಜಿಗದ, ರುದ್ರರಮಣೀಯ ತಾಣ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ.

ಈ ಸುರಂಗದಲ್ಲಿ ಕಾರು ಮತ್ತು ರೈಲು ಎರಡೂ ಓಡಾಡಬಹುದು ಎಂಬುದು ಇನ್ನೊಂದು ಅಚ್ಚರಿಯ ವಿಷಯ. ಈ ಸುರಂಗದ ನಿರ್ಮಾಣ ಕಾರ್ಯ ಮುಕ್ತಾಯವಾಗಿದ್ದು 1999 ರಲ್ಲಿ. ಸುಮಾರು 16 ಕಿಲೋಮೀಟರ್ ಉದ್ದದ ಡೆನ್ಮಾರ್ಕ್ ಮತ್ತು ಸ್ವೀಡನ್ ಅನ್ನು ಬೆಸೆಯುವ ಈ ಕೊಂಡಿ ಒಂದು ಸೇತುವೆ, ಒಂದು ಮಾನವ ನಿರ್ಮಿತ ದ್ವೀಪ ಮತ್ತು ಒಂದು ಸುರಂಗವನ್ನು ಒಳಗೊಂಡಿದೆ. ಈ ಭಾಗದಲ್ಲಿ ಪ್ರಯಾಣ ಮಾಡುವುದೇ ಪ್ರಯಾಣಿಕರಿಗೆ ಒಂದು ರೋಚಕ ಅನುಭವವೆನ್ನಿಸಿದೆ.





# ಏರೋಪ್ಲೇನ್ ಚಿಟ್ಟೆಗೂ ನಾಟಕ ಮಾಡೋಕೆ ಬರುತ್ತೆ ಗೊತ್ತಾ..?!

ಏರೋಪ್ಲೇನ್ ಚಿಟ್ಟೆ ಅಂದಾಕ್ಷಣ ಕೆಲವರಿಗೆ ಚಿಕ್ಕಂದಿನಲ್ಲಿ ಅವುಗಳ ಬಾಲಕ್ಕೆ ದಾರ ಕಟ್ಟಿ ಹಾರಿಬಿಡುತ್ತಿದ್ದುದು ನೆನಪಾಗಬಹುದು. ಹೆಚ್ಚು ಆಕರ್ಷಕವೇನಿಲ್ಲದ ಏರೋಪ್ಲೇನ್ ಚಿಟ್ಟೆಗಳಂದ್ರೆ ಕೆಲವರಿಗೆ ಅಷ್ಟಕ್ಕಷ್ಟೆ. ಆದ್ರೆ ಈ ಏರೋಪ್ಲೇನ್ ಚಿಟ್ಟೆಗಳು ಮಹಾನ್ ಬುದ್ಧಿವಂತ ಕೀಟಗಳು ಅಂದ್ರೆ ನಂಬ್ತೀರಾ..? ಇವು ತಮ್ಮನ್ನ ತಾವು ಉಳಿಸಿಕೊಳ್ಳೋಕೆ ಏನೆಲ್ಲ ನಾಟಕ ಮಾಡ್ತವೆ ಗೊತ್ತಾ..?

ಇತ್ತೀಚೆಗೆ ಸ್ವಿಟ್ಜರ್‌ಲ್ಯಾಂಡಿನ ಝುರಿಚ್ ವಿಶ್ವವಿದ್ಯಾಲಯವೊಂದರಲ್ಲಿ ನಡೆದ ಅಧ್ಯಯನದ ಪ್ರಕಾರ ಈ ಏರೋಪ್ಲೇನ್ ಚಿಟ್ಟೆಗಳು ತಮಗೆ ಇಷ್ಟವಿಲ್ಲದ ಗಂಡು ಏರೋಪ್ಲೇನ್ ಚಿಟ್ಟೆಗಳ ಕಣ್ಣು ತಪ್ಪಿಸುವುದಕ್ಕಾಗಿ ಸತ್ತಂತೆ ನಟಿಸುತ್ತವೆಯಂತೆ. ಗಂಡು ಏರೋಪ್ಲೇನ್ ಚಿಟ್ಟೆಗಳು ಹೆಣ್ಣು ಚಿಟ್ಟೆಯೊಡನೆ ಸರಸ ಸಲ್ಲಾಪ ನಡೆಸುವುದಕ್ಕಾಗಿ ಬಂದರೆ ಹೆಣ್ಣು ಚಿಟ್ಟೆಗಳು ಸತ್ತಂತೆ ನಟಿಸುತ್ತವೆಯಂತೆ. ಚಿಟ್ಟೆ ಸತ್ತಿದೆ ಎಂದು ಭಾವಿಸಿ ಗಂಡು ಏರೋಪ್ಲೇನ್ ಚಿಟ್ಟೆಗಳು ಬೇರೆಡೆಗೆ ಹಾರುತ್ತಿದ್ದಂತೆಯೆ, ಈ ಹೆಣ್ಣು ಚಿಟ್ಟೆಗಳು ಬದುಕಿದೆಯಾ ಬಡ ಜೀವವೇ ಅಂದುಕೊಂಡು ಬೇರೆಡೆಗೆ ಹಾರಿಬಿಡುತ್ತವೆಯಂತೆ! ನೋಡಿ ಶೀಲ ಉಳಿಸಿಕೊಳ್ಳೋದಕ್ಕೆ ಏರೋಪ್ಲೇನ್ ಚಿಟ್ಟೆಗಳೂ ಎಷ್ಟೆಲ್ಲ ಹರಸಾಹಸಪಡುತ್ತವೆ!

# ಒಂದು ಎಪಿಸೋಡ್‌ಗೆ 16 ಕೋಟಿ ರೂ.!




ಧಾರಾವಾಹಿಯಲ್ಲಿ ನಟಿಸುವ ನಟ ನಟಿಯರು ಒಂದು ಎಪಿಸೋಡ್‌ಗೆ ಅಬ್ಬಬ್ಬಾ ಅಂದ್ರೆ ಎಷ್ಟು ದುಡಿಯಬಹುದು? ಸಾವಿರ? ಲಕ್ಷ? ನಂಬಿದ್ರೆ ನಂಬಿ, ಬಿಟ್ರೆ ಬಿಡಿ, ನಾವು ಹೇಳ್ತಿರೋದಂತೂ ಸತ್ಯ. ವರದಿಯೊಂದರ ಪ್ರಕಾರ ಗೇಮ್ ಆಫ್ ಥ್ರೋನ್ಸ್ ಎಂಬ ಇಂಗ್ಲಿಷ್ ಧಾರಾವಾಹಿಯಲ್ಲಿ ನಟಿಸುವ ಪ್ರಮುಖ ನಟರಿಗೆ ಒಂದು ಎಪಿಸೋಡ್‌ಗೆ 16 ಕೋಟಿ ರೂ. ಸಂಬಳವಂತೆ!

ಈ ಧಾರಾವಾಹಿಯ ಜಗತ್ತಿನ ಎಲ್ಲ ದೇಶಗಳಲ್ಲೂ ಜನಪ್ರಿಯತೆಗಳಿಸಿರುವುದರಿಂದ ಧಾರಾವಾಹಿಯಲ್ಲಿ ನರ್ತಿಸುತ್ತಿರುವ ನಟರಿಗೂ ಬೇಡಿಕೆ ಹೆಚ್ಚು, ಅವರಿಗೆ ಅಭಿಮಾನಿಗಳೂ ಹೆಚ್ಚು, ಆದ್ದರಿಂದಲೇ ಆ ನಟರು ಬೇಡಿಕೆ ಇಡುವಷ್ಟು ಹಣವನ್ನು ನೀಡಿ ಅವರನ್ನು ನಟನೆಗೆ ಬಳಸಿಕೊಳ್ಳಲು ನಿರ್ಮಾಪಕರು ತುದಿಗಾಲಲ್ಲಿ ನಿಲ್ಲುತ್ತಾರೆ.

ಸಾಮಾನ್ಯ ವ್ಯಕ್ತಿಯೊಬ್ಬ ತನ್ನ ಬದುಕಿನಲ್ಲಿ ಎಂದಿಗೂ ನೋಡೇ ಇರದಷ್ಟು ಹಣವನ್ನು ಒಂದು ಎಪಿಸೋಡ್‌ಗೆ ನಟರು ಪಡೆಯುತ್ತಾರಂದ್ರೆ ಅಳಬೇಕೋ, ನಗಬೇಕೋ..? ನೀವೇ ಹೇಳಿ!